# ಆಹಾ ಸುದ್ದಿ!

★ ಸಸಿತೋಟ



ಇದು ಸಾಕುಮಂಗ 'ಡಾರ್ವಿನ್'. ಕೆನಡಾದ ಟೊರೊಂಟೋದಲ್ಲಿ ಇರುವ ತನ್ನ ಒಡತಿಯ ಮನೆಯಲ್ಲಿ ಮಂಗಾಟ ಮಾಡಿ ಹೊರಬಿದ್ದು ಮಾಲ್‌ನಲ್ಲಿ ವಿಂಡೋ ಷಾಪಿಂಗ್ ಮಾಡುತ್ತಿತ್ತು. ಅಲ್ಲಿಂದ ಸೀದಾ ಪ್ರಾಣಿ ಸೇವಾ ಸಂಸ್ಥೆ ಸೇರಿತು. ಮಂಗನನ್ನು ವಾಪಸ್ಸು ಕೊಡಿ ಎಂದು ಒಡತಿ ಯಾಸ್ಮಿನ್ ಒಂದಿಷ್ಟು ಜನರನ್ನು ಸೇರಿಸಿ ಪ್ರತಿಭಟಿಸಿ, ಈಗ ಕೋರ್ಟ್‌ನಲ್ಲಿ ಕಾನೂನು ಸಮರ ಶುರು ಮಾಡಿದ್ದಾಳೆ. ಎಲ್ಲವೂ ವಿಶ್ವದ ಪ್ರಮುಖ ಪತ್ರಿಕೆಗಳಿಗೆ ಭರ್ಜರಿ ಸುದ್ದಿಯಾಗುತ್ತಿವೆ. ಡಾರ್ವಿನ್ ವಿಕಾಸ ವಾದದಂತೆ ಸಂಸ್ಥೆಯಿಂದ ಹೊರಬೀಳುವಾಗ ಯಾವ ಸ್ಥಿತಿಯಲ್ಲಿರುತ್ತದೋ?

ಇಂಗ್ಲೆಂಡ್‌ನ 81 ವರ್ಷದ ಅಲನ್ ವೇಲ್ಸ್ ಬಿಟ್ಟಾಗ 10 ವರ್ಷ. ಆತ ವೇಲ್ಸ್‌ನ ವೆಲ್ಶ್ ಭಾಷೆಯನ್ನು ಕಲಿತಿರಲೇ ಇಲ್ಲ. ಆದರೆ 81ರ ಹರೆಯದಲ್ಲಿ ಪಾರ್ಶ್ವವಾಯು ಆಘಾತಕ್ಕೆ ಒಳಗಾಗಿ ಮೂರು ವಾರಗಳ ನಂತರ ಪ್ರಜ್ಞೆ ಮರುಕಳಿಸಿದಾಗ ಅಲನ್ ವೆಲ್ಶ್ ಮಾತನಾಡಲು ಆರಂಭಿಸಿದ. ಈಗ ಇಂಗ್ಲಿಷ್ ಭಾಷೆಯನ್ನು ಆತನಿಗೆ ಹೆಂಡತಿ ಕಲಿಸುತ್ತಿದ್ದಾಳಂತೆ. ಕೆಲವು ಬಾರಿ ಮೆದುಳು ಮಂಗನಂತಾಡುತ್ತದೆ.

ಕೆನಡಾದ ಕಾಫಿಹೌಸ್ ಒಂದರ ಬಳಿ ಡಿ.21ರಂದು ಕ್ಯೂನಲ್ಲಿ ಮೊದಲು ನಿಂತವ ತನ್ನ ಹಿಂದಿದ್ದ ವ್ಯಕ್ತಿಯ ಕಾಫಿ ಬಿಲ್ ಕೊಟ್ಟ. ಆ ವ್ಯಕ್ತಿ ತನ್ನ ಹಿಂದಿದ್ದವನಿಗೆ ಕಾಫಿ ಕೊಡಿಸಿದ. ಹೀಗೆ ಈ ಕಾಫಿ ಕೊಡಿಸುವ ಕ್ರಿಯೆ 228 ಮಂದಿಯವರೆಗೆ ಮುಂದುವರಿಯಿತಂತೆ. ಕೊನೆಗೆ ಈ ಉಚಿತ ಕಾಫಿ ಪ್ರಕ್ರಿಯೆ ಬ್ರೇಕ್ ಮಾಡಿದವನಿಗೆ ಜಿಪುಣನೆಂಬ ಬಿರುದು ನೀಡಿದರೋ ಇಲ್ಲವೋ ಗೊತ್ತಾಗಿಲ್ಲ.



ವಿಯೆಟ್ನಾಮಿನಲ್ಲಿ ಪತ್ತೆಯಾದ ಕಪ್ಪೆಯಿದು. ಸದಾ ನೀರಿಗಾಗಿ 'ವಾಟರ್ ವಾಟರ್' ಎಂದು ಒರಲುವ ಕಪ್ಪೆಗಳೇ ಇರುವಾಗ ಈ ಕಪ್ಪೆ ಮಾತ್ರ ಹಕ್ಕಿಯಂತೆ ಹಾಡುತ್ತದಂತೆ. ಬಹುಶಃ ದಾಹ ಕಡಿಮೆಯಾದ ಮೇಲೆ ಹಾಡುವ ಲಹರಿ ಬಂದಿರಬಹುದು.




ಹೊಸ ವರ್ಷದ ಸ್ನಾನ ಎಂಬ ಸಂಪ್ರದಾಯ ಹಲವು ದೇಶಗಳಲ್ಲಿದೆ. ಅದಕ್ಕೆಂದೇ ಕ್ಲಬ್‌ಗಳನ್ನೂ ಮಾಡಿಕೊಂಡಿರುತ್ತಾರೆ. ರಷ್ಯಾದ ಸೈಬೀರಿಯಾದಲ್ಲಿ ಈ ಸ್ನಾನದ ಕ್ಲಬ್ ಸದಸ್ಯರು ಹಿಮದಲ್ಲಿ ಕೆಲಕಾಲ ಹೂತು ಸಂಪ್ರದಾಯ ಆಚರಣೆ ಮಾಡುತ್ತಾರಂತೆ. ಸಮೀಪದಲ್ಲೇ ಉಣ್ಣೆಯ ಕಂಬಳಿ ಹಿಡಿದುಕೊಂಡು ರಕ್ಷಣಾ ತಂಡದವರು ಕಾದಿರುತ್ತಾರಂತೆ. ಪಾಪ, ಒಬ್ಬರಿಗೆ ಮೋಜು, ಇನ್ನೊಬ್ಬರಿಗೆ ಕರ್ತವ್ಯದ ಸಂಕಟ.

ಅರೆನಗ್ನ ಚಿತ್ರಗಳನ್ನು ಪ್ರಕಟಿಸುವ ಅಮೆರಿಕಾದ 'ಪ್ಲೇಬಾಯ್' ನಿಯತಕಾಲಿಕದ ಸ್ಥಾಪಕ ಹ್ಯೂ ಹೆಫ್ನರ್ ಕಳೆದ ವರ್ಷದ ಕೊನೆಯ ದಿನ ಮದುವೆಯಾದ. ವಧು ಈ ನಿಯತಕಾಲಿಕದ ರೂಪದರ್ಶಿ 26ರ ಯುವತಿ ಕ್ರಿಸ್ಟಲ್. 2011ರ ಜುಲೈನಲ್ಲಿ ಇದೇ ವರನ ಜೊತೆ ನಿಗದಿಯಾಗಿದ್ದ ಮದುವೆಗೆ ಐದು ದಿನಗಳಿರುವಾಗ ಓಡಿ 'ರನ್ ಅವೇ ಬ್ರೈಡ್' ಎಂಬ ಹೆಸರು ಪಡೆದಾಕೆ. 86 ವರ್ಷದ ಅಗರ್ಭ ಶ್ರೀಮಂತ ಹೆಫ್ನರ್‌ಗೆ ಊರುಗೋಲಾಗಲು ಬಯಸಿ ಈಗ ಮತ್ತೆ ಮದುವೆ ಮಂಟಪಕ್ಕೆ ಪ್ರವೇಶ ಪಡೆದಿರಬಹುದು.

